ಪಿ ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **02.03.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಆರೋಪಿತರ ಪರಃ ಶ್ರೀ ಎಂ.ಎಸ್.ಆರ್. ವಕೀಲರ ಮೂಲಕ ಃ

ನಾನು ವ್ಯವಸಾಯ ಮತ್ತು ವ್ಯಾಪಾರವನ್ನು ಮಾಡುತ್ತೇನೆ. ನಮ್ಮ ಜಮೀನಿನಲ್ಲಿ ಟಮೋಟೋ ಬೆಳೆಯುತ್ತೇನೆ. ನಾನು ವರ್ಷಕ್ಕೆ 20 ಸಾವಿರ ರೂಪಾಯಿ ನೀಡಿ ಬೇರೆಯವರ ಜಮೀನನ್ನು ಗುತ್ತಿಗೆಗೆ ಪಡೆದಿರುತ್ತೇನೆ. ನನ್ನ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ. ನಾನು ಗುತ್ತಿಗೆಗೆ ಪಡೆದಿರುತ್ತೇನೆ ಎಂದು ಹೇಳುವ ಜಮೀನಿನ ಸರ್ವೆ ನಂಬರ್ ಮತ್ತು ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ಆ ಸಂಬಂಧವಾಗಿ ಬರವಣಿಗೆ ಮಾಡಿಸಿರುವುದಿಲ್ಲ. ನಾನು ಆಡುಗಳನ್ನು ಮೇಯಿಸಿ, ಮಾರಾಟ ಮಾಡುತ್ತೆನೆ. ಈ ಸಂಬಂಧವಾಗಿ ಯಾವುದೇ ದಾಖಲೆ ಇರುವುದಿಲ್ಲ. ನಾನು ಜಮೀನನ್ನು ಗುತ್ತಿಗೆಗೆ ಮಾಡಿಕೊಂಡಿರುತ್ತೇನೆ ಎಂದು ಹೇಳುವುದು ಮತ್ತು ಆಡಿನ ವ್ಯಪಾರ ಮಾಡುತ್ತೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಗುತ್ತಿಗೆಗೆ ಜಮೀನನ್ನು ಪಡೆದಿದ್ದರೆ ದಾಖಲೆ ಇರುತ್ತಿತ್ತು ಅದರೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 3-4 ತಿಂಗಳ ಆಡು ಮರಿಗಳನ್ನು ತೆಗೆದುಕೊಂಡು ಬಂದು ಸಾಕಿ ಆ ನಂತರ ಮಾರಾಟ ಮಾಡುತ್ತೇನೆ. ನಾನು ಸಂತೆಯಿಂದ ಆಡುಗಳನ್ನು ತರುತ್ತಿದ್ದು, ಈ ಸಂಬಂಧವಾಗಿ ಸಾಕ್ಷ್ಯ ವಿಚಾರಣೆ ಮಾಡಿಸಲು ಆಗುವುದಿಲ್ಲ. ನಾನು ಪುಟ್ಟರಾಮು ಎಂಬುವವರಿಂದ ಗುತ್ತಿಗೆಗೆ ಪಡೆದಿದ್ದು, ಅವರ ಸಾಕ್ಷ್ಯ ವಿಚಾರಣೆ ಮಾಡಿಸುತ್ತೇನೆ. ಸದರಿಯವರು ನಮ್ಮ ಗಟ್ಟಿಕೊಪ್ಪಲು ಗ್ರಾಮದಲ್ಲಿ ಜಮೀನು ಹೊಂದಿರುತ್ತಾರೆ.

2. ನಾನು ಬಿ.ಪಿ.ಎಲ್. ಪಡಿತರ ಚೀಟಿಯನ್ನು ಹೊಂದಿರುತ್ತೇನೆ. ಕಡು ಬಡತನ ಇರುವವರಿಗೆ ಮಾತ್ರ ಸದರಿ ಪಡಿತರ ಚೀಟಿಯನ್ನು ನೀಡುತ್ತಾರೆ ಎಂದರೆ 5 ಎಕರೆ ಇರುವವರು ಪಡೆದಿರುತ್ತಾರೆ. ಸದರಿಯವರಿಗೆ ಪಡಿತರ ಚೀಟಿ ವಿತರಿಸಿರುತ್ತಾರೆ ಎಂಬ ಸಂಬಂಧವಾಗಿ ದಾಖಲೆ ಇರುವುದಿಲ್ಲ. ನಮ್ಮ ಕುಟುಂಬಕ್ಕೆ ತಿಂಗಳಿಗೆ 30 ರಿಂದ 40 ಸಾವಿರ ಆದಾಯ ಇರುತ್ತದೆ. ಆ ರೀತಿ ಆದಾಯ ಬರುವವರಿಗೆ ಬಿ.ಪಿ.ಎಲ್. ಕಾರ್ಡ್‌ನ್ನು ಕೊಡುವುದಿಲ್ಲ ಆದರೂ ಸಹ ನಾನು ಅಷ್ಟೊಂದು ಆದಾಯ ಹೊಂದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ತಿಂಗಳಿಗೆ ಸುಮಾರು 15 ಸಾವಿರ ಖರ್ಚು ಇರುತ್ತದೆ.

3. ನಾನು ಆರೋಪಿಗೆ ನಗದು ರೂಪದಲ್ಲಿ ಸಾಲ ನೀಡಿರುತ್ತೇನೆ. ಸದರಿ ಕಾಲಕ್ಕೆ ಆರೋಪಿ ಮತ್ತು ನನ್ನನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ನಾನು 3 ಲಕ್ಷ

ರೂಪಾಯಿಗಳನ್ನು ಒಂದೇ ಬಾರಿಗೆ ಕೊಟ್ಟಿರುತ್ತೇನೆ. ನನಗೆ ಸೇರಿದಂತೆ ಬ್ಯಾಂಕ್ ಖಾತೆ ಇರುತ್ತದೆ. ನನ್ನ ಬ್ಯಾಂಕ್ ಖಾತೆಯಲ್ಲಿ 3 ಲಕ್ಷ ರೂಪಾಯಿ ವರೆಗೆ ವ್ಯವಹಾರ ನಡೆದಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನನಗೆ ಯಾವುದೇ ಆದಾಯ ಇರುವುದಿಲ್ಲ ಮತ್ತು ನನ್ನ ಬ್ಯಾಂಕ್ ಖಾತೆಯಲ್ಲಿ ಅಷ್ಟೊಂದು ವ್ಯವಾಹಾರ ಆಗದೇ ಇದ್ದರೂ ಸಹ 3 ಲಕ್ಷ ರೂಪಾಯಿ ಸಾಲ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಬ್ಯಾಂಕ್ ಪಾಸ್ ಪುಸ್ತಕವನ್ನು ಹಾಜರಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ನಾನು ಬೇರೆಯವರಿಗೆ ಸಾಲ ನೀಡಿರುವುದಿಲ್ಲ. ಆರೋಪಿಯು 3 ಲಕ್ಷಕ್ಕೆ ಒಂದು ರೂಪಾಯಿಯಂತೆ ಬಡ್ಡಿಯನ್ನು ಕೊಡುವುದಾಗಿ ಒಪ್ಪಿಕೊಂಡಿದ್ದರು, ಆದರೆ ಬಡ್ಡಿಯನ್ನು ಕೊಟ್ಟಿರುವುದಿಲ್ಲ. 3 ತಿಂಗಳಿಗೆ ಆರೋಪಿಯು 9 ಸಾವಿರ ರೂಪಾಯಿ ಬಡ್ಡಿಯನ್ನು ಕೊಡಬೇಕಾಗಿತ್ತು.

4. ಜನವರಿ 2018 ರಲ್ಲಿ ಆರೋಪಿಯು ನನ್ನನ್ನು ಸಾಲ ಕೇಳಿರುತ್ತಾರೆ. ನಾನು ಒಂದೇ ವಾರಕ್ಕೆ ಆರೋಪಿಗೆ ಸಾಲ ಕೊಟ್ಟಿರುತ್ತೇನೆ. ಮನೆ ಕಟ್ಟಿಸುತ್ತಿರುವುದಾಗಿ ಹೇಳಿ ಆರೋಪಿಯು ಸಾಲ ಪಡೆದಿರುತ್ತಾರೆ. ಅವರು ಯಾರಬಳಿ ಕೈ ಸಾಲ ಮಾಡಿರುತ್ತಾರೆ ಎಂದು ನಾನು ಕೇಳಿರುವುದಿಲ್ಲ, ಅವರೂ ಸಹ ಹೇಳಿರುವುದಿಲ್ಲ. ಆರೋಪಿಯು ಯಾವುದೇ ಉದ್ದೇಶಕ್ಕಾಗಿ ನನ್ನ ಬಳಿ 3 ಲಕ್ಷ ರೂಪಾಯಿಗಳನ್ನು ಸಾಲ ಕೇಳಿಲ್ಲ ಎಂದರೆ ಸರಿಯಲ್ಲ.ಆರೋಪಿಯು ಸಾಲ ಕೇಳಿದಾಗ ಮತ್ತು ನಾನು ಸಾಲ ನೀಡಿರುತ್ತೇನೆ ಎಂದು ಹೇಳುವಾಗ 3ನೇ ವ್ಯಕ್ತಿ ಯಾರೂ ಇರಲಿಲ್ಲ. ನಾನು ಪರಿಚಯ ಮತ್ತು ವಿಶ್ವಾಸದ ಆಧಾರದ ಮೇಲೆ ಸಾಕ್ಷಿದಾರರು ಇಲ್ಲದೇ ನೇರವಾಗಿ ಸಾಲ ಕೊಟ್ಟಿರುತ್ತೇನೆ. ನಾನು ಬೇರೆ ಜಮೀನನ್ನು ಗುತ್ತಿಗೆ ಮಾಡಿ, 3 ಲಕ್ಷ ರೂಪಾಯಿ ಹೊಂದಿಸುವ ಚೈತನ್ಯ ನನಗೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವ ವ್ಯವಹಾರದಿಂದ 3 ಲಕ್ಷ ರೂಪಾಯಿಗಳನ್ನು ಹೊಂದಿಸಲು ಸಾದ್ಯವಿಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ಲಕ್ಷ ರೂಪಾಯಿ ಕೊಟ್ಟಿರುತ್ತೇನೆ ಎಂದು ಹೇಳುವ ಕಾಲಕ್ಕೆ ಆರೋಪಿಯಿಂದ ನಂಬಿಕೆ ಇದ್ದ ಕಾರಣ ಯಾವುದೇ ದಾಖಲೆಯನ್ನು ಬರೆಸಿಕೊಂಡಿರುವುದಿಲ್ಲ.

5. ಆರೋಪಿಗೆ 74 ವರ್ಷ ವಯಸ್ಸು ಎಂದರೆ ಸರಿ. ಸದರಿಯವರು ಪೊಲೀಸ್ ಇಲಾಖೆಯಲ್ಲಿ ಮುಖ್ಯ ಪೇದೆಯಾಗಿ ನಿವೃತ್ತಿಹೊಂದಿರುತ್ತಾರೆ ಎಂದರೆ ಸರಿ. ಅವರು ಮತ್ತು ನಾನು ಬೇರೆ ಬೇರೆ ಗ್ರಾಮದವರು ಆಗಿರುತ್ತೇವೆ. ನಾನು ಮತ್ತು ಅವರು ಸಂಬಂಧಿಕರು ಅಥವಾ ದಾಯಾದಿಗಳು ಆಗಿರುವುದಿಲ್ಲ. ಸದರಿಯವರ ಕುಟುಂಬದ ಸದಸ್ಯರ ಪರಿಚಯ ನನಗೆ ಇರುವುದಿಲ್ಲ. ಆರೋಪಿಯು ಮಳವಳ್ಳಿಯಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದಾಗ ಒಂದು ಬಾರಿ ಹೋಗಿದ್ದೆ. ನನಗೆ ಆರೋಪಿಯ ಪರಿಚಯ ಇಲ್ಲದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು 3 ತಿಂಗಳ

ಒಳಗಾಗಿ ಸಾಲದ ಮೊತ್ತವನ್ನು ಹಿಂತಿರುಗಿಸುವುದಾಗಿ ಹೇಳಿದ್ದು, ನಾನು 2 ತಿಂಗಳು 20 ದಿನ ಆದ ನಂತರ ಆರೋಪಿಯನ್ನು ಭೇಟಿ ಮಾಡಿ ಹಣ ಕೇಳಿರುತ್ತೇನೆ. ದಿ: 20.03.2018 ರಂದು ಆ ರೀತಿ ನಾನು ಭೇಟಿ ಮಾಡಿರುತ್ತೇನೆ. ಆಗ ಆರೋಪಿಯು ಒಂದಲ್ಲಾ ಒಂದು ಕಾರಣವನ್ನು ಹೇಳುತ್ತಾ ಬಂದಿರುತ್ತಾರೆ. ನನಗೆ ಸ್ವಲ್ಪ ಮೊತ್ತವನ್ನೂ ಸಹ ಆರೋಪಿಯು ಕೊಟ್ಟಿರುವುದಿಲ್ಲ. ದಿ: 26.03.2018 ರಂದು ಆರೋಪಿಯು 3 ಲಕ್ಷ ರೂಪಾಯಿಗಳಿಗೆ ನನಗೆ ಚೆಕ್‌ನ್ನು ನೀಡಿರುತ್ತಾರೆ. ಬಡ್ಡಿಯನ್ನು ನಿಧಾನಕ್ಕೆ ಕೊಡುವುದಾಗಿ ಅಸಲಿಗೆ ಚೆಕ್ ಕೊಟ್ಟಿರುತ್ತಾರೆ. ಬಡ್ಡಿಯ ಮೊತ್ತಕ್ಕೆ ದಾವೆಯನ್ನು ಸಲ್ಲಿಸಿರುವುದಿಲ್ಲ. ಆರೋಪಿಯು ಸಿದ್ದರಾಮೇಗೌಡರವರಿಗೆ ನೀಡಿದ್ದ ಚೆಕ್‌ನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಅವರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಈಗ ನೋಡುತ್ತಿರುವ ದೂರಿನಲ್ಲಿರುವ ವಿಳಾಸದ ವ್ಯಕ್ತಿಯ ಪರಿಚಯ ನನಗೆ ಇರುವುದಿಲ್ಲ. ಸದರಿ ಸಿದ್ದರಾಮೇಗೌಡರವರು ಆರೋಪಿಯ ವಿರುದ್ದ ಹಣ ಬರಬೇಕೆಂದು ಇದೇ ನ್ಯಾಯಾಲಯದಲ್ಲಿ ಸಿ.ಸಿ. 179/2018 (ಹೊಸ ನಂಬರ್ ಸಿ.ಸಿ. 199/2025) ರಂತೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಸಿದ್ದರಾಮೇಗೌರವರ ಜೊತೆಗೆ ಸೇರಿ ಅವರು ಕೊಟ್ಟ ಚೆಕ್‌ನ್ನು ದುರುಪಯೋಗ ಪಡಿಸಿಕೊಂಡು ಈ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

6. ನಾನು ಮೊದಲು ಈ ಪ್ರಕರಣದಲ್ಲಿ ರಮೇಶ್ ಎಂಬ ವಕೀಲರನ್ನು ನೇಮಕ ಮಾಡಿಕೊಂಡಿದ್ದೆ. ಸದರಿ ವಕೀಲರನ್ನು ಸಿದ್ದರಾಮೇಗೌಡರವರು ತನ್ನ ಪ್ರಕರಣದಲ್ಲಿ ನೇಮಕ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಕೀಲರ ಮೂಲಕ 02 ಪ್ರಕರಣಗಳಿಗೆ ನೋಟೀಸ್‌ನ್ನು ಕಳುಹಿಸಿರುತ್ತೇವೆ ಎಂದರೆ ನಾನು ಸದರಿಯವರೆ ಮೂಲಕ ನೋಟೀಸ್‌ನ್ನು ಕಳುಹಿಸಿದ್ದು, ಬೇರೆ ಪ್ರಕರಣದ ಬಗ್ಗೆ ನನಗೆ ಗೊತ್ತಿರುವುದಿಲ್ಲ. 497521 ನಂಬರ್‌ನ ಚೆಕ್‌ನ್ನು ಆರೋಪಿಯು ಕೊಟ್ಟಿದ್ದರು. ಸಿದ್ದರಾಮೇಗೌಡರವರು 497522 ನಂಬರ್‌ನ ಚೆಕ್‌ಗೆ ಸಂಬಂಧಿಸಿಂತೆ ದೂರು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಈ 02 ದೂರುಗಳನ್ನು ಒಬ್ಬರೇ ವಕೀಲರು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರಸ್ತುತ ಪ್ರಕಣದಲ್ಲಿ ಆರೋಪಿಯು ಸರಿಯಾಗಿ ಪ್ರಕರಣ ನಡೆಸದೇ ಶಿಕ್ಷೆಯಾಗಿ ಮೇಲ್ಮನವಿ ಸಲ್ಲಿಸಿದ ನಂತರ ಈ ನ್ಯಾಯಾಲಯಕ್ಕೆ ಪ್ರಕರಣವು ಮರುವಿಚಾರಣೆಗಾಗಿ ವಾಪಸ್ ಬಂದ ನಂತರ ನಾನು ವಕೀಲರನ್ನು ಬದಲಾವಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಮೇಲ್ಮನವಿಯಲ್ಲಿ ವಾದ ಮಂಡನೆ ಮಾಡಿದ ನಂತರ ನಾನು ವಕೀಲರನ್ನು ಬದಲಾವಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

7. ಆರೋಪಿಯ ಖಾತೆಯು ಮುಕ್ತಾಯವಾಗಿದೆ ಎಂದು ಬ್ಯಾಂಕಿನವರು ಹಿಂಬರಹ ನೀಡಿರುತ್ತಾರೆ. ಆರೋಪಿಯ ಖಾತೆಯು ಯಾವಾಗ ಮುಕ್ತಾಯವಾಗಿದೆ ಎಂದು ತಿಳಿದುಕೊಳ್ಳಲು ಪ್ರಯತ್ನಿಸಿರುವುದಿಲ್ಲ. 2016 ರಲ್ಲಿ ಆರೋಪಿಯು ತನ್ನ ಬ್ಯಾಂಕ್ ಖಾತೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಯಾವ ಕಾರಣಕ್ಕೆ ಆರೋಪಿಯು ಖಾತೆಯನ್ನು ಮುಕ್ತಾಯ ಗೊಳಿಸಿಕೊಂಡಿರುತ್ತಾರೆ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ಆರೋಪಿಯು ತಾನು ನಿವೃತ್ತಿಯಅದ ನಂತರ ಖಾತೆಯನ್ನು ಮುಕ್ತಾಯಗೊಳಿಸಿಕೊಂಡಿದ್ದು, ನನಗೆ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಿಪಿ 1 ನ್ನು ಮೊದಲೇ ಭರ್ತಿ ಮಾಡಿಕೊಂಡು ಬಂದಿದ್ದು, ನನ್ನ ಮುಂದೆ ಸಹಿ ಮಾತ್ರ ಮಾಡಿರುತ್ತಾರೆ. ಸಹಿ ಮತ್ತು ನಿಪಿ 1 ರಲ್ಲಿ ಇರುವ ಇತರೆ ಒಕ್ಕಣೆಗಳು ಬೇರೆ ಬೇರೆ ಇಂಕುಗಳಲ್ಲಿ ಇರುತ್ತದೆ ಎಂದರೆ ಸರಿ. ಸಿದ್ದರಾಮೇಗೌಡರವರಿಗೆ ನೀಡಿದ್ದ ಚೆಕ್‌ನ್ನು ಭರ್ತಿ ಮಾಡಿಕೊಂಡು ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 2018 ರಲ್ಲಿ ನಿಪಿ 1 ರಲ್ಲಿ ಇರುವ ಬರವಣಿಗೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. 2013 ರಲ್ಲಿ ನಿಪಿ 1(ಎ) ಆಗಿದೆ ಎಂದರೆ ಸರಿಯಲ್ಲ. ಆರೋಪಿಯಿಂದ ಹಣ ವಸೂಲಿ ಮಾಡಲು ಬ್ಯಾಂಕ್‌ಗೆ ಹಾಜರುಪಡಿಸುವ ಉದ್ದೇಶದಿಂದ 2018 ರಲ್ಲಿ ನಿಪಿ 1 ನ್ನು ಭರ್ತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

8. 2013 ರಲ್ಲಿ ಆರೋಪಿಯು ಸಿದ್ದರಾಮೇಗೌಡರವರಿಂದ ನಿವೇಶನ ಖರೀದಿ ಮಾಡಲು 30 ಸಾವಿರ ರೂಪಾಯಿ ಸಾಲ ಬೇಕೆಂದು ಪಡೆದಿದ್ದರು ಎಂದರೆ ಅವರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ 1 ಮತ್ತು ಮೇಲೆ ಹೇಳಿದ ಪ್ರಕರಣದ ಚೆಕ್‌ನ್ನು ಆರೋಪಿಯು 2013 ರಲ್ಲಿ ಸಿದ್ದರಾಮೇಗೌಡರವರಿಗೆ ನೀಡಿದ್ದರು ಎಂದರೆ ಸರಿಯಲ್ಲ. ಸಾಲದ ಮೊತ್ತವನ್ನು ತೀರುವಳಿ ಮಾಡಿ ಚೆಕ್‌ಗಳನ್ನು ವಾಪಸ್ ಕೇಳಿದಾಗ ಹೆಚ್ಚಿನ ಬಡ್ಡಿಗೆ ಬೇಡಿಕೆ ಇಟ್ಟು ಸಿದ್ದರಾಮೇಗೌಡವರು ಸದರಿ ಚೆಕ್‌ಗಳನ್ನು ವಾಪಸ್ ನೀಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಚೆಕ್‌ನಲ್ಲಿ ಒಂದು ಚೆಕ್‌ನ್ನು ದುರುಪಯೋಗ ಪಡಿಸಿಕೊಂಡು ನನ್ನ ಮೂಲಕ ದೂರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಮತ್ತೊಂದು ಚೆಕ್‌ನ್ನು ಇದೇ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿರುದಿಲ್ಲ. ಆರೋಪಿಯು ನಮಗೆ ಯಾವುದೇ ಹಣವನ್ನು ವಾಪಸ್ ಕೊಡಬೇಕಾಗಿಲ್ಲದೇ ಇದ್ದರೂ ಸಹ ನಾನು ಮತ್ತು ಸಿದ್ದರಾಮೇಗೌಡರವರು ಸೇರಿ ಸುಳ್ಳು ದೂರುಗಳನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

9. ಆರೋಪಿಯು ಯಾವಾಗ ನಿವೃತ್ತಿಯಾಗಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಅವರು ಎ.ಎಸ್.ಐ. ಆಗಿ ನಿವೃತ್ತಿಯಾಗಿರುತ್ತಾರೆ. ಆರೋಪಿಗೆ ನಿವೃತ್ತಿ ಪಿಂಚಣಿ ಬರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿಯವರಿಗೆ ತಿಂಗಳಿಗೆ 20 ರಂದ 25 ಸಾವಿರ ರೂಪಾಯಿ ನಿವೃತ್ತಿ ವೇತನ ಬರುತ್ತದೆ ಎಂದು ನನಗೆ

ಗೊತ್ತಿರುವುದಿಲ್ಲ. ಆರೋಪಿಗೆ 3 ಜನ ಮಕ್ಕಳು ಇರುತ್ತಾರೆ. ಅವರಲ್ಲಿ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬರು ಮಗಳು ಇರುತ್ತಾರೆ. ಆರೋಪಿಯ ಮಗಳು ತೋಟಗಾರಿಕೆ ಇಲಾಖೆಯಲ್ಲಿ ಕೆಲಸ ಮಾಡುವ ಬಗ್ಗೆ ಅವರೇ ಹೇಳಿದ್ದರು. ಆರೋಪಿಯ ಮಗಳು ಸರ್ಕಾರಿ ಕೆಲಸದಲ್ಲಿ ಇದ್ದು, 60 ರಿಂದ 70 ಸಾವಿರ ವೇತನ ಬರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆರೋಪಿ ಮತ್ತು ಅವರ ಕುಟುಂಬಕ್ಕೆ ಎಷ್ಟು ಜಮೀನು ಇದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಆರೋಪಿಯ ಪತ್ನಿಯ ಹೆಸರಿನಲ್ಲಿ ಮೂರರಿಂದ ಮೂರುವರೆ ಎಕರೆ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆರೋಪಿಯ ಪತ್ನಿಯ ಹೆಸರು ಲಕ್ಷ್ಮೀ ಎಂದರೆ ನನಗೆ ಗೊತ್ತಿರುವುದಿಲ್ಲ. ಆರೋಪಿಯ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ. ಅವರ ಹೆಸರು ಬೋರಯ್ಯ @ ಹೊಟ್ಟೆಬೋರಯ್ಯ ಎಂದರೆ ನನಗೆ ಗೊತ್ತಿರುವುದಿಲ್ಲ. ಆರೋಪಿ ಮತ್ತು ಅವರ ತಂದೆಯ ಹೆಸರಿನಲ್ಲಿ ಒಂದರಿಂದ ಎರಡು ಎಕರೆ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅದು ನೀರಾವರಿ ಜಮೀನು ಆಗಿದ್ದು, ಭತ್ತ ಮತ್ತು ಕಬ್ಬನ್ನು ಬೆಳೆಯುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅವರಿಗೆ 10-15 ಲಕ್ಷ ರೂಪಾಯಿ ಆದಾಯ ಇದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆದಕಾರಣ ಅವರಿಗೆ ನನ್ನಿಂದ 3 ಲಕ್ಷ ರೂಪಾಯಿಸಾಲ ಪಡಯುವ ಸಂದರ್ಭ ಇಲ್ಲ ಎಂದರೆ ಸರಿಯಲ್ಲ. ನನಗೆ 3 ಲಕ್ಷ ರೂಪಾಯಿಯನ್ನು ಸಾಲ ನೀಡುವ ಚೈತನ್ಯ ಇರುವುದಿಲ್ಲ ಮತ್ತು ನಾನು ಕಡುಬಡವ ಆದ ಕಾರಣ ಬಿ.ಪಿ.ಎಲ್. ಕಾರ್ಡ್‌ನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ವ್ಯವಸಾಯ ಮತ್ತು ವ್ಯಾಪಾರ ವೃತ್ತಿಯನ್ನು ಮಾಡದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರ ಬರವಣಿಗೆಯನ್ನು ಯಾವಾಗ ಮಾಡಿರುತ್ತಾರೆ ಎಂಥು ಮತ್ತು ಸದರಿ ಇಂಕಿನ ಬಗ್ಗೆ ರಾಸಾಯನಿಕ ಪರೀಕ್ಷೆಗೆ ಕಳುಹಿಸಿಲು ನನ್ನ ಅಭ್ಯಂತರ ಇರುವುದಿಲ್ಲ. ಆರೋಪಿಯು ನನ್ನಿಂದ ಸಾಲ ಪಡೆಯದೇ ಇದ್ದರೂ ಸಹ ನಾನು ಸಿದ್ದರಾಮೇಗೌಡರವರ ಜೊತೆಗೆ ಸೇರಿ ಸುಳ್ಳು ದೂರನ್ನು ಸಲ್ಲಿಸಿ, ಸುಳ್ಳು ದಾಖಲೆಗಳನ್ನು ಹಾಜರಪಡಿಸಿ, ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ.</u>

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.